ಶ್ರೀ ಜಗದೀಶ್‌ಶೆಟ್ಟರ್ : ಸ್ವಲ್ಪ ಆ ಸ್ಲಾಬ್ ರೇಟನ್ನಾದರೂ ಕಡಿಮೆ ಮಾಡಿ. ನೋಡಿ ನೀವು ಜನರಿಂದ ಹಣವನ್ನು ತೆಗೆದುಕೊಂಡು ನೀರಿನ ಯೋಜನೆಗೆ ಆ ಹಣವನ್ನು ಹಾಕಿದ್ದೇವೆ . ಅದನ್ನು ಮರಳಿ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಅದು ಸಾಧ್ಯವೇ ಇಲ್ಲ. ಕೆಲವೊಂದು ಸೋಷಿಯಲ್‌ವರ್ಕ್ಸ್‌ನ್ನು ಸರ್ಕಾರ ಮಾಡಲೇಬೇಕಾಗುತ್ತದೆ. ಕುಡಿಯುವ ನೀರಿನ ವ್ಯವಸ್ಥೆ ಯನ್ನು ಮಾಡಬೇಕಾಗುತ್ತದೆ . ಬೇರೆ ಸಂಪನ್ಮೂಲದಿಂದ ರೊಕ್ಕವನ್ನು ಹಾಕಿ. ನಾವು ಇದೇ ರೊಕ್ಕದಿಂದ ಅಥವಾ ಕರದಿಂದ ಅವರಿಗೆ ನೀರು ಕೊಡುತ್ತೇವೆಂದರೆ ಪ್ರಾಕ್ಟಿಕಲಿ ಅದು ಸಾಧ್ಯ ಆಗುವುದಿಲ್ಲ. ಅದಕ್ಕೆ ಸ್ವಲ್ಪ ಕಡಿಮೆ ಮಾಡಿ ಮಾನ್ಯ ನಂಜಯ್ಯಮಠ್ ಅವರು ಹೇಳಿದ ಹಾಗೆ 20 ರೂಪಾಯಿ ಮಾಡಿ ಅಥವಾ 30 ರೂಪಾಯಿ ಮಾಡಿ. ಸ್ವಲ್ಪ ಭಾರ ಎನಿಸಬಾರದು ಜನರಿಗೆ ರೆಕವರಿ ಆಗಬೇಕು. ನೀವು ಹೆಚ್ಚಿಗೆ ಮಾಡಿ ಜನ ಕೊಡಲಿಲ್ಲ ಎಂದರೆ ನೀವೇನು ಮಾಡುತ್ತೀರಿ? ಅದರ ಬಗ್ಗೆ ರೀಕನ್ಸಿಡರ್ ಮಾಡಿ, ಸ್ವಲ್ಪ ಈ ಬಗ್ಗೆ ಸ್ವಡಿ ಮಾಡಿ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ: ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಹ ವಿಚಾರದ ಬಗ್ಗೆ ನಾನು ಬೇಕಾದರೆ ಪರಿಶೀಲಿಸುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಗುರುಸ್ವಾಮಿ ಅವರದ್ದು ಶ್ರೀ ದಿನೇಶ್ ಗುಂಡೂರಾವ್ ತಮ್ಮ ಪ್ರಶ್ನೆಗೆ ಒಂದು ವಾರ ಟೈಮ್ ಬೇಕು ಎಂದು ಕೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: 2-3 ಇಲಾಖೆಯಿಂದ ಮಾಹಿತಿ ಬರಬೇಕು. ಆ ನಂತರ ಉತ್ತರ ಹೇಳುತ್ತೇನೆ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ

132 (1230) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಈ ಹಿಂದೆ ಪ್ರಾಧಿಕಾರ ಅಧ್ಯಕ್ಷರ ಅವಧಿಯಲ್ಲಿ ಖಾಸಗಿಯವರಿಗೆ ವಿತರಿಸಿದ ಎನ್. ಓ. ಸಿ. ಎಷ್ಟು ಹಾಗೂ ಮೂಡಾವತಿಯಿಂದ ಎಷ್ಟು ಬಡವಣೆಗಳನ್ನು ಮಾಡಲಾಗಿದೆ ; ಹಾಗೂ ಸಾರ್ವಜನಿಕರಿಗೆ ವಿತರಣೆಯಾಗಿರುವ ನಿವೇಶನಗಳೆಷ್ಟು?

ಆ)ನಗರಾಭಿವೃದ್ಧಿ ಪ್ರಾಧಿಕಾರದ ಮತಿಯಿಂದ ಇದುವರೆವಿಗೆ ಮೈಸೂರು ನಗರ ಪಾಲಿಕೆಗೆ ಹಸ್ತಾಂತರಿಸಿದ ಬಡಾವಣೆಗಳೆಷ್ಟು ಬಾಕಿ ಉಳಿದ ಬಡಾವಣೆಗಳೆಷ್ಟು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಅ)44 ಖಾಸಗಿಯವರಿಗೆ ಎನ್. ಓ. ಸಿ. ವಿತರಿಸಿದೆ . 6 ಬಡಾವಣೆಗಳನ್ನು ಮಾಡಲಾಗಿದೆ. 5599 ನಿವೇಶಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡಲಾಗಿದೆ.

ಆ) 15 ಬಡಾವಣೆಗಳನ್ನು ನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ . ಇನ್ನು 15 ಬಡಾವಣೆಗಳು ಹಸ್ತಾಂತರಿಸುವ ಕ್ರಿಯೆಯಲ್ಲಿದೆ.

3.00 ಪಿ.ಎಂ.

ಶ್ರೀ ಎ.ಎಸ್.ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ , ನಾನು ಕೇಳಿರುವಂಥ ಪ್ರಶ್ನೆಗೆ ಸಂಬಂಧಿಸಿದಂತೆ ಖಾಸಗಿಯವರಿಗೆ ನಗರಾಭಿವೃದ್ಧಿ ಪ್ರಾಧಿಕಾರದವರು 44 ಎನ್. ಓ.ಸಿ. ಗಳನ್ನು ವಿತರಿಸಿದ್ದಾರೆಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದ್ದಾರೆ . ಇದನ್ನು ಯಾವ ಆಧಾರದ ಮೇಲೆ ವಿತರಿಸಲಾಗಿದೆ ? ಇದರ ಕನ್ಸಿಡರೇಶನ್ ಏನು? ಎನ್. ಓ.ಸಿ. ಗಳನ್ನು ಖಾಸಗಿ ಹೌಸಿಂಗ್ ಸೊಸೈಟಿಯವರಿಗೂ ಕೊಡಲಾಗಿದೆ . ತಾವು ಎನ್. ಓ.ಸಿ. ಗಳನ್ನು ಈ ರೀತಿ ಕೊಡುತ್ತಿರುವಾಗ ನಗರದ ಸಿ.ಡಿ.ಪಿ. ಲೈನ್‌ವೊಳಗೆ ಬರುವುದೇ? ಆಥವಾ ಆದರಾಚೆಗೆ ಬರುವುದೇ? ನಿವೇಶನಗಳನ್ನು ಏನು ವಿತರಿಸಿದ್ದೀರಿ , ಇದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಸ್ಪೆಷಲ್ ಕೆಟಗೆರಿಯಲ್ಲಿ ಎಷ್ಟೆಷ್ಟು ಹಂಚಿದ್ದೀರಿ ? ಬಡಾವಣೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡದೇ ಅದನ್ನು ನಗರ ಪಾಲಿಕೆಗೆ ಹಸ್ತಾಂತರಿಸಿರುವುದ ನಿಜವೇ? ಅಲ್ಲವೇ? ಹೇಳ ಬೇಕು.

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ 44 ಖಾಸಗಿಯವರಿಗೆ ಎನ್.ಓ.ಸಿ.ಗಳನ್ನು ವಿತರಿಸಲಾಗಿದೆ . ಎನ್. ಓ.ಸಿ. ಗಳನ್ನು ಕೊಡುವಂಥ ಸಂದರ್ಭದಲ್ಲಿ ಆರು ಬಡಾವಣೆಗಳನ್ನು ಮಾಡಲಾಗಿದ್ದು ಸುಮಾರು 5, 599 ನಿವೇಶಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡಲಾಗಿದೆ . ನಿವೇಶನಗಳನ್ನು ಅಲಾಟ್‌ಮೆಂಟ್ ಆಫ್ ಸೈಟ್ಸ್ ರೂಲ್ಸ್ ಪ್ರಕಾರ ಹಂಚಲಾಗಿರುತ್ತದೆ . ಆ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಮಾಜಿ ಸೈನಿಕ ವರ್ಗದವರಿಗೆ ಎಷ್ಟೆಷ್ಟು ಶೇಕಡಾವಾರು ಇದೆಯೆಂಬುದರ ವಿವರಗಳನ್ನು ನಾನು ಸವಿವರವಾಗಿ ಓದುನೃದಕ್ಕೆ ಸಾಧ್ಯವಾಗುವುದಿಲ್ಲ. ಆದರೆ , ಕಾನೂನಿನ ರೀತ್ಯ ನಾವು ನಿವೇಶನಗಳನ್ನು ಹಂಚಿದ್ದೇವೆ . ಎನ್. ಓ.ಸಿ. ಯನ್ನು ಖಾಸಗಿಯವರಿಗಲ್ಲದೆ , ಹೌಸಿಂಗ್ ಸೊಸೈಟಿಯವರಿಗೂ ಕೊಟ್ಟಿದ್ದೇವೆ . ಎನ್. ಓ.ಸಿ. ಯನ್ನು ಯಾವ ಆಧಾರದ ಮೇಲೆ ಕೊಡುತ್ತೀರೆಂಬ ಮೂಲಭೂತ ಪ್ರಶ್ನೆ ಏನು ಕೇಳಿದ್ದೀರಿ , ಈ ಕುರಿತು ಹೇಳುವುದೇನೆಂದರೆ, ಕೆಲವು ಪ್ರದೇಶಗಳನ್ನು ಪ್ರಾಧಿಕಾರದವರು ಅಭಿವೃದ್ಧಿಪಡಿಸಿಲ್ಲದಿರುವಾಗ ಆ ಪ್ರದೇಶದ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಖಾಸಗಿಯವರು ಮುಂದೆ ಬಂದಂಥ ಸಂದರ್ಭದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಖಾಸಗಿಯವರು ಸಲ್ಲಿಸಿದ ಅರ್ಜಿಯು ಪ್ರಾಧಿಕಾರದ ಅಧ್ಯಕ್ಷರು ರಚಿಸಿರುವ ಸಮಿತಿ ಮುಂದೆ ಬರುತ್ತದೆ. ಸಮಿತಿಯಲ್ಲಿ ಮೂರು ಜನ ಸದಸ್ಯರುಗಳಿದ್ದು, ಪ್ರತಿಯೊಬ್ಬ ಸದಸ್ಯರೂ ಕೂಡ ಅರ್ಜಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಮತ್ತು ಸಾಧಕ - ಬಾಧಕಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಎನ್. ಓ.ಸಿ. ಯನ್ನು ಕಾನೂನು ರೀತ್ಯ ವಿತರಿಸಲಾಗುತ್ತದೆ.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಅವರ ಎರಡನೇ ಪ್ರಶ್ನೆ ತಾವು ಉತ್ತರ ಹೇಳಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಸಂಪ್ಲೆಮೆಂಟರಿ ಪ್ರಶ್ನೆ ಕೇಳಿ ..... you Cannot guide.

(ಗೊಂದಲ)

ಶ್ರೀ ಎ. ರಾಮದಾಸ್ : ನಾನು ಮೈಸೂರಿಗೆ ಸಂಬಂಧಿಸಿದಂತೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಇಲ್ಲಿ ಪ್ರೊಸೀಜರ್ ಏನಿದೆಯೆಂದರೆ, ಯಾವ ಮಾನ್ಯ ಸದಸ್ಯರು ಮುಖ್ಯ ಪ್ರಶ್ನೆ ಕೇಳಿರುತ್ತಾರೋ, ಅವರು ಎರಡು ಉಪ ಪ್ರಶ್ನೆಗಳನ್ನು ಕೇಳಿದ ಬಳಿಕವೇ ನೀವು ಉಪ ಪ್ರಶ್ನೆಗಳನ್ನು ಕೇಳಬೇಕು.

ಶ್ರೀ ಎ. ಎಸ್. ಗುರುಸ್ವಾಮಿ : 44 ಖಾಸಗಿಯವರಿಗೆ ಎನ್. ಓ.ಸಿ. ಗಳನ್ನು ವಿತರಿಸಲಾಗಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇದರಲ್ಲಿ ಪೈವೆಂಟ್ ಲೇಔಟ್‌ಗಳೆಷ್ಟು? ಹೌಸಿಂಗ್ ಸೊಸೈಟಿಯ ಲೇಔಟ್‌ಗಳೆಷ್ಟು? ಮತ್ತು ಲ್ಯಾಂಡ್ ಡೆವಲಪರ್ಸ್ ಮಾಡಿರುವಂಥ ಲೇಔಟ್‌ಗಳೆಷ್ಟು? ಎಂಬುದನ್ನು ತಿಳಿಸಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಈ ಕುರಿತ ವಿವರವಾದ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ನಾನು ಒದಗಿಸಿಕೊಡುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಿಸಿದಂತೆ ನಾನು ಒಂದು ಪ್ರಮುಖವಾದ ವಿಚಾರವನ್ನು ಹೇಳಿದೆ. ಆದರೆ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಏಕೆ ಕೋಪಿಸಿಕೊಂಡರೋ ನನಗರ್ಥವಾಗಲಿಲ್ಲ. ನಾನು ತಮ್ಮ ಮುಖಾಂತರ ಕೇಳುವ ಪ್ರಶ್ನೆ ಇಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕೋಪಿಸಿಕೊಳ್ಳಲಿಲ್ಲ. ಇಲ್ಲಿರತಕ್ಕ ಪ್ರೊಸೀಜರ್ ಬಗ್ಗೆ ಹೇಳಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಾವು ಆ ಪ್ರೊಸೀಜರ್ ಬಿಟ್ಟು ಹೋಗುತ್ತಿಲ್ಲ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ನಗರಾಭಿವೃದ್ಧಿ ಪ್ರಾಧಿಕಾರದ ಮತಿಯಿಂದ ಇದುವರೆವಿಗೆ ಮೈಸೂರು ನಗರಪಾಲಿಕೆಗೆ ಹಸ್ತಾಂತರಿಸಿದ ಬಡಾವಣೆಗಳೆಷ್ಟು? ಎಂಬ ಪ್ರಮುಖವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಗುರುಸ್ವಾಮಿಯವರು ಕೇಳಿದ್ದು, ಇದಕ್ಕೆ ಉತ್ತರವಾಗಿ ಸಚಿವರು 15 ಬಡಾವಣೆಗಳನ್ನು ನಗರಪಾಲಿಕೆಗೆ ಹಸ್ತಾಂತರಿಸಲಾಗಿದೆಯೆಂದಿದ್ದಾರೆ. ಈ ಕುರಿತು ಸರ್ಕಾರ ಆದೇಶ ಹೊರಡಿಸಿದ್ದು, ಆದೇಶದಂತೆ ಎಲ್ಲವನ್ನೂ ಕೂಡ ಈಗಾಗಲೇ ನಗರಪಾಲಿಕೆ ವಹಿಸಿಕೊಂಡಿದೆಯೇ? ನಗರಪಾಲಿಕೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಎರಡು ಸಂಸ್ಥೆಗಳಲ್ಲಿ ಕಂದಾಯ ನಿಗದಿಪಡಿಸುತ್ತಿರುವುದು ನಿಜವೇ? ಹಾಗೆಯೇ ಅದೇ ಸರ್ಕಾರದ ಆದೇಶದ ಪ್ರಕಾರ ಎರಡು ಸಂಸ್ಥೆಗಳೂ ಪ್ಲಾನ್ ಅನ್ನು ಅಪ್ರೂವಲ್ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಪನ್ನ ಎರಡನೇ ಪ್ರಶ್ನೆಯೇನೆಂದರೆ, 15 ಬಡಾವಣೆಗಳನ್ನು ನಗರಪಾಲಿಕೆಗೆ ಹಸ್ತಾಂತರಿಸಬೇಕೆಂದು ಏನಿತ್ತು, ಬಡಾವಣೆಗಳು ಅಭಿವೃದ್ಧಿಯಾಗಿಲ್ಲವೆಂದಿರುವುದರಿಂದ ಅಭಿವೃದ್ಧಿ ಮಾಡಿಕೊಡಿಯೆಂದು ಅಥವಾ ಅಭಿವೃದ್ಧಿಗೆ ಬೇಕಾದಂಥ ಖರ್ಚಿನ ಹಣ ಕೊಟ್ಟರೆ ಮಾತ್ರ ನಾವು ವಹಿಸಿಕೊಳ್ಳುತ್ತೇವೆಂದು ಏನಾದರೂ ಅವರು ತಮಗೆ ಪತ್ರ ಬರೆದಿದ್ದಾರೆಯೇ ಅದನ್ನು ತಿಳಿಸಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಈಗ 15 ಬಡಾವಣೆಗಳನ್ನು ನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ. ಅದರಲ್ಲಿ ಆರು ಯೋಜನೆಗಳಾದ ವಿಜಯನಗರ ನಾಲ್ಕನೇ ಹಂತ ಒಂದನೇ ಫೇಸ್, ವಿಜಯನಗರ ನಾಲ್ಕನೇ ಹಂತ ಎರಡನೇ ಫೇಸ್, ವಿಜಯನಗರ ನಾಲ್ಕನೇ ಹಂತ ಮೂರನೇ ಫೇಸ್, ದಟ್ಟಿ ಹಳ್ಳಿಮೂರನೇ ಹಂತ, ದೇವನೂರು ಎರಡನೇ ಹಂತಒಂದನೇ ಫೇಸ್ ಮತ್ತು ದೇವನೂರು ಎರಡನೇ ಹಂತ ಎರಡನೇ ಫೇಸ್ ಇದ್ದು, ಸುಮಾರು 1,969 ಎಕರೆಗಳಷ್ಟು ಪ್ರದೇಶದಲ್ಲಿ 23,387 ನಿವೇಶನಗಳನ್ನು ಈಗಾಗಲೇ ಹಂಚಿಕೆಮಾಡಲಾಗಿದೆ. ಈ ಎಲ್ಲಾ ಹಂಚಿಕೆಗಳನ್ನು ಮತ್ತು ಯೋಜನೆಗಳನ್ನು ಈಗಾಗಲೇ ನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ ಮತ್ತು ಮುಂದಿನ ಕಾರ್ಯವನ್ನು ಈಗಾಗಲೇ ನಿರ್ವಹಿಸುತ್ತಿದೆ. ಆದರೆ ಸಾತಗಳ್ಳಿ ಎರಡನೇ ಹಂತ ಮತ್ತು ದೇವನೂರು ಮೂರನೇ ಹಂತ ಈ ಎರಡು ಯೋಜನೆಗಳ ಸುಮಾರು 1,176 ಎಕರೆಗಳಷ್ಟು ಜಮೀನಿನಲ್ಲಿ 12,887 ವಿವಿಧ ಅಳತೆಯ ನಿವೇಶನಗಳನ್ನು ತಯಾರಿಸಿಟ್ಟಿದ್ದು ಹಂಚಿಕೆ

ಮಾಡಬೇಕಾಗಿರುತ್ತದೆ . ನಿವೇಶನಗಳನ್ನು ಹಂಚುವಂತ ವ್ಯವಸ್ಥೆಯನ್ನು ನಾವು ಅದಷ್ಟು ಶೀಘ್ರದಲ್ಲಿ ಮಾಡಿಸುತ್ತೇವೆ. ಇನ್ನು ಉಳಿದಿರುವ ನಿವೇಶನ ಬಗ್ಗೆ ಹೇಳುವುದಾದರೆ ಅದನ್ನೂ ಸಹ ನಗರಪಾಲಿಕೆಯೇ ನೋಡಿಕೊಳ್ಳುತ್ತಿದೆ.

ಶ್ರೀ ಎ. ರಾಮದಾಸ್ : ಒಂದೇ ಪ್ರದೇಶದ 15 ಬಡಾವಣೆಗಳಿಂದ ನಗರಪಾಲಿಕೆಯವರು ಕಂದಾಯ ತೆಗೆದುಕೊಳ್ಳುತ್ತಿದ್ದಾರೆ. ಜೊತೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಸಹ ತೆಗೆದುಕೊಳ್ಳುತ್ತಿದ್ದಾರೆ ಏಕೆಂದರೆ, ಬಡಾವಣೆಗಳನ್ನು ಹಸ್ತಾಂತರ ಮಾಡಿಕೊಂಡಿಲ್ಲವೆಂದು ನಗರಪಾಲಿಕೆ ಹೇಳುತ್ತಿದೆ. ಆದರೆ, ಈ ಎರಡೂ ಸಂಸ್ಥೆಗಳು ಪ್ಲಾನ್ ಅನ್ನು ಅಪ್ರೂವ್ ಮಾಡಿಕೊಂಡಿವೆ ಮತ್ತು ಆ ಬಡಾವಣೆಗಳಲ್ಲಿ ಯಾವುದೇ ರೀತಿ ಡೆವಲಪ್‌ಮೆಂಟ್ ಆಗಿಲ್ಲದಿರುವುದರಿಂದ ನಾವು ತೆಗೆದುಕೊಳ್ಳುತ್ತಿಲ್ಲವೆಂದು ಹೇಳುತ್ತಿರುವುದಿಂದ ಇದಕ್ಕೆ ಹೇಗೆ ನೀವು ಅಂತಿಮ ಹಾಡುತ್ತೀರಿ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಇದು ಇಡೀ ರಾಜ್ಯಾದ್ಯಂತ ಇರುವ ಸಮಸ್ಯೆಯಾಗಿದೆ . ಕೆಲವು ಸಲ ಖಾಸಗಿಯವರು ಲೇಔಟ್‌ಗಳನ್ನು ನಿರ್ಮಾಣ ಮಾಡಿದಾಗ ಅಲ್ಲಿ ವಿದ್ಯುತ್, ಒಳಚರಂಡಿ, ರಸ್ತೆ ನಿರ್ಮಾಣ ಮುಂತಾದ ಸೌಕರ್ಯಗಳನ್ನು ಒದಗಿಸಿಕೊಡುವ ಎಲ್ಲಾ ಜವಾಬ್ದಾರಿಯು ಅವರದಾಗಿರುತ್ತದೆ. ಆದರೆ, ಕಾರಣಾಂತರಗಳಿಂದ ಸೌಕರ್ಯಗಳನ್ನು ಕಲ್ಪಿಸಿ ಅಭಿವೃದ್ಧಿಪಡಿಸುವುದಕ್ಕಾಗದೇ ನಗರಪಾಲಿಕೆಗೆ ಹಸ್ತಾಂತರಿಸುತ್ತಾರೆ . ಹೀಗೆ ನಗರಪಾಲಿಕೆಗೆ ಹಸ್ತಾಂತರಿಸಿದ ಬಡಾವಣೆಗಳನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಅಲ್ಲಿ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಮುಂದಾದರೂ ಬಡಾವಣೆಗಳನ್ನು ನಿರ್ಮಿಸಿದವರ ಷರತ್ತು ಇರುತ್ತದೆ. ಹೀಗಾಗಿ ಕೆಲವು ಪ್ರದೇಶಗಳಲ್ಲಿ ನೂನ್ಯತೆಗಳಿವೆ , ಇದು ರಾಜ್ಯಾದ್ಯಂತ ಇದೆ . ಈ ವಿಷಯವನ್ನು ಮಾನ್ಯ ಸದಸ್ಯರಾದ ರಾಮದಾಸ್‌ರವರು ಪ್ರಸ್ತಾಪಿಸಿರುವುದರಿಂದ ಇದರ ಬಗ್ಗೆ ಏನಾದರೊಂದು ಕಾನೂನು-ಕಟ್ಟಳೆ ತರುವ ಮೂಲಕ ಯಾರು ಬಡಾವಣೆಗಳನ್ನು ನಿರ್ಮಿಸುತ್ತಿರುತ್ತಾರೋ ಅವರು ಅಲ್ಲಿ ರಸ್ತೆ, ಒಳಚರಂಡಿ, ವಿದ್ಯುತ್ ಮುಂತಾದ ಎಲ್ಲಾ ಸವಲತ್ತುಗಳನ್ನು ಕಲ್ಪಿಸಿ ಕೊಟ್ಟ ನಂತರವೇ ನಗರಪಾಲಿಕೆಯಾಗಲೀ, ಸ್ಥಳೀಯ ಸಂಸ್ಥೆಗಳಾಗಲೀ ಆ ಬಡಾವಣೆಗಳನ್ನು ನಿರ್ವಹಿಸುವುದಕ್ಕೆ ನಾನು ಪ್ರಯತ್ನಿಸುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : (ಏರಿದ ಧ್ವನಿಯಲ್ಲಿ) ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಮೂರಾ (ಎಂಯುಡಿಎ) ದವರು ಮೂಢರೇ ಆಗಿದ್ದಾರೆ! ಏಕೆಂದರೆ , ಅವರು ಎಲ್ಲಾ ಕೆಲಸಗಳನ್ನು ಪೂರ್ತಿಗೊಳಿಸಲಿಲ್ಲ. ಎಲ್ಲವನ್ನೂ ತಿರುಪತಿ ಕ್ಷೌರ ಮಾಡಿದ್ದಾರೆ ! ಆದ್ದರಿಂದಲೇ ಅದನ್ನು ತೆಗೆದುಕೊಳ್ಳುವುದಿಲ್ಲವೆಂದು ನಗರಪಾಲಿಕೆಯು ತಿರಸ್ಕರಿಸಿದ್ದು . ಇಂತಹ ಪರಿಸ್ಥಿತಿಯಲ್ಲಿ ತಪ್ಪು ಮಾಹಿತಿ ಕೊಟ್ಟಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಬಡಾವಣೆ ಗಳಲ್ಲಿ ವಾಸಿಸುತ್ತಿರುವ ಜನರ ಬವಣೆ ಜಾಸ್ತಿಯಾಗಿದೆ. ಇದಕ್ಕೆ ಏನು ಉತ್ತರ ಹೇಳುತ್ತೀರೋ ಹೇಳಿ.

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೇ: 'ಮೂಢರು' 'ತಿರುಪತಿ ಕ್ಷೌರ' ಎನ್ನುವ ಪದಗಳನ್ನು ಏಕೆ ಬಳಸುತ್ತೀರಿ? ನೀವಿಲ್ಲಿ ಒಳ್ಳೆಯ ಪದಗಳನ್ನು ಉಪಯೋಗಿಸಬೇಕು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಅವರು ತಪ್ಪು ಮಾಹಿತಿ ನೀಡಿರುವುದರಿಂದ ಅವರು ಮೂಢರೇ ಆಗಿದ್ದಾರೆ

ಶ್ರೀ ಡಿ.ಬಿ. ಚಂದ್ರೇಗೌಡ : ಸಮಾಧಾನವಾಗಿ ಮಾತನಾಡಿದರೆ ಒಳ್ಳೆಯ ಮಾತುಗಳು ಬರುತ್ತವೆ. ಭಾವನಾತ್ಮಕವಾಗಿ ಮಾತನಾಡಿದರೆ ಏನೇನೋ ಮಾತುಗಳು ಬರುತ್ತವೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಶಂಕರಲಿಂಗೇಗೌಡರು ಮಾಡನಾಡುವುದು ಹಾಗೆಯೇ

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೇ , ನೀವು ಸಮಾಧಾನವಾಗಿ ಮಾತನಾಡಿ. ನಿಮ್ಮಿಂದ ನಮಗೆಲ್ಲರಿಗೂ ಟೆನ್‌ಷನ್ ಬರುವ ಸಾಧ್ಯತೆಯಿದೆ! ನಿಮ್ಮ ಆರೋಗ್ಯದ ದೃಷ್ಟಿಯಿಂದ ಲಾದರೂ ನೀವು ಸಮಾಧಾನವಾಗಿ ಮಾತನಾಡಬೇಕು.

ಶ್ರೀ ಎ. ರಾಮದಾಸ್ : ಇದು ಖಾಸಗಿ ಬಡಾವಣೆಗಳಲ್ಲ, ಅಭಿವೃದ್ಧಿ ಪ್ರಾಧಿಕಾರ ಇದನ್ನು ಅಭಿವೃದ್ಧಿ ಪಡಿಸಿರತಕ್ಕದ್ದು, ಆದ್ದರಿಂದ ಮೂಡಾ ಬಡಾವಣೆಗಳನ್ನೇನು ನಗರಪಾಲಿಕೆಗೆ ವರ್ಗಾ ವಣೆ ಮಾಡಿದ್ದೀರಿ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಎಲ್ಲಿ ಅಭಿವೃದ್ಧಿಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿರಲಿ ಲ್ಲವೋ ಅದನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಎ. ಎಸ್.ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ , ಇನ್ನು ಎಷ್ಟು ದಿವಸಗಳಲ್ಲಿ ಈ ಬಡಾವಣೆ ಗಳನ್ನು ಮಹಾನಗರ ಪಾಲಿಕೆಗೆ ವರ್ಗಾವಣೆ ಮಾಡುತ್ತೀರಿ? ಕಳೆದ ಐದಾರು ವರ್ಷ ಗಳಿಂದ ಸಹ ಇದನ್ನು ಹಸ್ತಾಂತರ ಮಾಡಿಲ್ಲ. ಅನೇಕ ಕಾರಣಗಳಿಂದ ಮಾಡುತ್ತಿಲ್ಲ. ಮುನಿಸಿಪಾಲಿಟಿಯವರು ಮತ್ತು ನಗರ ಅಭಿವೃದ್ಧಿ ಮಂಡಳಿಯವರು ಇಬ್ಬರು ಸಹ ಅಡ್ಜಿನಿಸ್ಟ್ರೇಷನ್ ಮಾಡುತ್ತಿದ್ದಾರೆ. ಎರಡು ಕಡೆ ತೆರಿಗೆಯನ್ನು ವಸೂಲಿ ಮಾಡುತ್ತಿದ್ದಾರೆ. ಆದರೆ ಬಡಾವಣೆ ಮಾತ್ರ ಅಭಿವೃದ್ಧಿಯಾಗುತ್ತಿಲ್ಲ. ಆದ್ದರಿಂದ ಇನ್ನು ಎಷ್ಟು ದಿವಸಗಳಲ್ಲಿ ಈ ಬಡಾವಣೆಗಳನ್ನು ನಗರಪಾಲಿಕೆಗೆ ಹಸ್ತಾಂತರ ಮಾಡುತ್ತೀರಿ ಎಂಬುದನ್ನು ದಯಮಾಡಿ ತಿಳಿಸಿ

ಶ್ರೀ ಬಿ.ಬಿ.ಚಿಮ್ಮನಕಟ್ಟಿ : ಆದಷ್ಟು ಬೇಗ ಮಾಡುತ್ತೇವೆ.

ಎಸ್.ಎಫ್.ಸಿ ಅನುದಾನಗಳು

134 (1229) ಶ್ರೀ ಯೋಗೀಶ್ ಭಟ್. ಎನ್. (ಮಂಗಳೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿನ ಮೂರ್ಚ್ 1999ರ ಮಾಹೆಗೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಮತ್ತು ಟಿಎಫ್‌ಸಿ ಗೆ ಮ್ಯಾಪಿಂಗ್ ಅನುದಾನವಾಗಿ ಎಸ್.ಎಫ್. ಸಿ ಅನುದಾನ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆಯೇ?

ಆ) ಹಾಗಾದರೆ ಅದರಲ್ಲಿ ಮಂಗಳೂರು ಮಹಾನಗರಪಾಲಿಕೆಗೆ ಎಷ್ಟು ಮೊತ್ತದ ಅನುದಾನ ಬಿಡುಗಡೆ ಮಾಡಿದೆ.

ಇ) ರಾಜ್ಯದ ಮಹಾನಗರಪಾಲಿಕೆಗಳಿಗೆ ಬಿಡುಗಡೆಯಾದ (1998-99) ಅನುದಾನದ ವಿವರ ತಿಳಿಸಿರಿ.